ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 848
ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್ ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯಲ್ಲಿ ಇದುವರೆಗೂ ಕೋವಿಡ್ ಸೋಂಕಿಗೆ ತುತ್ತಾದವರ ಸಂಖ್ಯೆ ಎಷ್ಟು;	ದಿನಾಂಕ:01.03.2020 ರಿಂದ ದಿನಾಂಕ:15.09.2021ರ ವರೆಗೆ ಕೊಡಗು ಜಿಲ್ಲೆಯಲ್ಲಿ 36,090 ಜನರು ಕೋವಿಡ್–19 ಸೋಂಕಿಗೆ ತುತ್ತಾಗಿರುತ್ತಾರೆ.
ಆ	ಇವರಲ್ಲಿ ಸಂಪೂರ್ಣವಾಗಿ ಗುಣಮುಖರಾದವರು ಹಾಗೂ ಮೃತರಾದವರ ಸಂಖ್ಯೆ ಎಷ್ಟು;	ದಿನಾಂಕ:01.03.2020 ರಿಂದ 15.09.2021ರ ವರೆಗೆ ಕೊಡಗು ಜಿಲ್ಲೆಯಲ್ಲಿ 35236 ಜನರು ಸಂಪೂರ್ಣವಾಗಿ ಗುಣಮುಖರಾಗಿರುತ್ತಾರೆ ಹಾಗೂ 323 ಜನರು ಮರಣ ಹೊಂದಿರುತ್ತಾರೆ.
ಇ	ಜಿಲ್ಲೆಯಲ್ಲಿ ಕೋವಿಡ್ ಸೋಂಕಿಗೆ ಒಳಗಾಗಿ ಪ್ರಸ್ತುತ ಚಿಕಿತ್ಸೆ ಪಡೆಯುತ್ತಿರವವರ ಸಂಖ್ಯೆ ಎಷ್ಟು;	ಪ್ರಸ್ತುತ ದಿನಾಂಕ:15.09.2021ರಲ್ಲಿ ಇದ್ದಂತೆ ಕೊಡಗು ಜಿಲ್ಲೆಯಲ್ಲಿ 531 ಜನರು ಕೋವಿಡ್–19 ಚಿಕಿತ್ಸೆ ಪಡೆಯುತ್ತಿದ್ದಾರೆ.
ಈ	ಕೋವಿಡ್ ಸೋಂಕಿತರಿಗಾಗಿ ಕೊಡಗು ಜಿಲ್ಲೆಯಲ್ಲಿ ಒದಗಿಸಲಾಗಿರುವ ಸೌಲಭ್ಯಗಳೆನು; ಪ್ರಸುತ ಜಿಲ್ಲೆಯಲ್ಲಿನ ಸೌಲಭ್ಯಗಳನ್ನು ಬಳಸಿಕೊಂಡು, ಏಕಕಾಲದಲ್ಲಿ ಗರಿಷ್ಠ ಎಷ್ಟು ಜನ ಸೋಂಕಿತರಿಗೆ ವೈದ್ಯಕೀಯ ಸೇವೆ ಕಲ್ಪಿಸಲು ಸಾಧ್ಯವಿದೆ? (ವಿವರ ನೀಡುವುದು)	ಕೋವಿಡ್ ಸೋಂಕಿತರಿಗಾಗಿ ಕೊಡಗು ಜಿಲ್ಲೆಯಲ್ಲಿ ಒದಗಿಸಲಾಗುವ ಸೌಲಭ್ಯಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆಕುಕ 109 ಎಸ್‌ಬಿವಿ 2021.

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕೋವಿಡ್ ಸೋಂಕಿತರಿಗಾಗಿ ಕೊಡಗು ಜಿಲ್ಲೆಯಲ್ಲಿ ಒದಗಿಸಲಾಗಿರುವ ಸೌಲಭ್ಯಗಳು:

- ಜಿಲ್ಲೆಯಲ್ಲಿ **1.06 ಕೋಟಿ** ವೆಚ್ಚದಲ್ಲಿ **ವೈರಾಣು ಟೆಸ್ಟಿಂಗ್ ಲ್ಯಾಬ್** ಸ್ಥಾಪಿಸಲಾಗಿದೆ.
- ಜಿಲ್ಲೆಯಲ್ಲಿ ಪ್ರತಿದಿನ ಸುಮಾರು **2600**ಕ್ಕಿಂತಲೂ ಅಧಿಕ **ಆರ್.ಟಿ.ಪಿ.ಸಿ.ಆರ್** ಮತ್ತು ಆಂಟಿಜನ್ ಟೆಸ್ಟ್ ಮಾಡಲಾಗುತ್ತಿದೆ.
- ಕೋವಿಡ್ ಪರೀಕ್ಷೆ ನಡೆಸುವ ಸಲುವಾಗಿ ಜಿಲ್ಲೆಯಲ್ಲಿ **09** ಸಂಚಾರಿ ತಂಡಗಳನ್ನು ರಚಿಸಲಾಗಿದೆ.
- ಜಿಲ್ಲಾ ಆಸ್ಪತ್ರೆ, ಮಡಿಕೇರಿ ಇಲ್ಲಿ **300** ಆಕ್ಸಿಜನೇಟೆಡ್ ಬೆಡ್‌ಗಳಿಗೆ ವ್ಯವಸ್ಥೆ ಮಾಡಿಕೊಂಡಿದ್ದು, ಸುಸಜ್ಜಿತವಾದ **56 ಐ.ಸಿ.ಯು ಬೆಡ್** ಮತ್ತು **43 ವೆಂಟಿಲೇಟರ್**ಗಳನ್ನು ಹೊಂದಲಾಗಿದೆ.
- ಜಿಲ್ಲೆಯಲ್ಲಿ **32** ಅಂಬುಲೆನ್ಸ್ ವಾಹನಗಳಿದ್ದು, ಗಂಟಲು/ಮೂಗು ದ್ರವ ಸಂಗ್ರಹಣೆಗಾಗಿ **5** ಹಾಗೂ ಶವ ಸಾಗಾಣಿಕೆಗಾಗಿ **4** ವಾಹನಗಳನ್ನು ಮೀಸಲಿಡಲಾಗಿದೆ.
- ಅಲ್ಲದೇ ಗಂಭೀರ ಸ್ವರೂಪದ ಸೋಂಕಿತರ ಸೇವೆಗಾಗಿ **ಹೈಟೆಕ್ ಮಾದರಿಯ ಆಂಬುಲೆನ್ಸ್ ವಾಹನಗಳನ್ನು** ಸಜ್ಜುಗೊಳಿಸಲು ಕ್ರಮವಹಿಸಲಾಗುತ್ತಿದೆ.
- ಜಿಲ್ಲೆಯಲ್ಲಿ **05 ಡಿ.ಸಿ.ಹೆಚ್.ಸಿ** ಗಳು ಸೋಂಕಿತರ ಚಿಕಿತ್ಸೆಗೆ ಲಭ್ಯವಿರುತ್ತವೆ. **ಜಿಲ್ಲಾ ಆಸ್ಪತ್ರೆ–150**ಬೆಡ್‌ಗಳು, **ಸೋಮವಾರಪೇಟೆ (ತಾಲ್ಲೂಕು ಆಸ್ಪತ್ರೆ)–50** ಬೆಡ್‌ಗಳು, **ವಿರಾಜಪೇಟೆ (ತಾಲ್ಲೂಕು ಆಸ್ಪತ್ರೆ)–50** ಬೆಡ್‌ಗಳು, **ಪಾಲಿಬೆಟ್ಟ–30** ಬೆಡ್‌ಗಳು, ಹಾಗೂ **ಕುಟ್ಟ– 30** ಬೆಡ್‌ಗಳು **ಒಟ್ಟಾರೆ–310** ಬೆಡ್‌ಗಳು).
- **ದಿನಾಂಕ: 15.05.2021ರಂದು ಮಡಿಕೇರಿ ಮೆಡಿಕಲ್ ಕಾಲೇಜಿನಲ್ಲಿ 100 ಹಾಸಿಗೆಗಳ ಡಿ.ಸಿ.ಹೆಚ್.ಸಿಕೇಂದ್ರವನ್ನು ಉದ್ಘಾಟಿಸಲಾಗಿದ್ದು,** ಇದಕ್ಕಾಗಿ **87** ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಒದಗಿಸಲಾಗಿದೆ.
- **ಐ.ಸಿ.ಯು.** ಘಟಕದಲ್ಲಿ **ನವಜಾತ ಶಿಶುಗಳಿಗೆ** ಹಾಗೂ **ನಾನ್ ಕೋವಿಡ್ ರೋಗಿಗಳ ಡಯಾಲಿಸಿಸ್‌ಗೆ** ಪ್ರತ್ಯೇಕವಾದ ಸೌಲಭ್ಯ ಕಲ್ಪಿಸಲಾಗಿದೆ.
- ಜಿಲ್ಲೆಯಲ್ಲಿ **13 ಸಾವಿರ ಲೀಟರ್** ಸಾಮರ್ಥ್ಯದ ಲಿಕ್ವಿಡ್ ಆಕ್ಸಿಜನ್ ಸಂಗ್ರಹಣಾ ಘಟಕವನ್ನು ಸ್ಥಾಪಿಸಲಾಗಿದ್ದು, ಪ್ರತಿನಿತ್ಯ ಸರಾಸರಿ **4 ಸಾವಿರಲೀಟರ್** ಆಮ್ಲಜನಕ ಅವಶ್ಯವಿದೆ.
- ಜಿಲ್ಲೆಗೆ ನಿಗದಿಯಾಗಿದ್ದ ಆಕ್ಸಿಜನ್ ಹಂಚಿಕೆ ಪ್ರಮಾಣವನ್ನು **3500** ಲೀ.ನಿಂದ **6000** ಲೀ.ಗೆ ಹೆಚ್ಚಿಸಲಾಗಿದೆ. ಇದರಿಂದ ಜಿಲ್ಲೆಗೆ ಸಾಕಷ್ಟು ಪ್ರಮಾಣದ ಆಕ್ಸಿಜನ್ ಲಭ್ಯವಾಗಲಿದೆ.
- ಹಾಲಿ ಇದ್ದ **03** ಕೋವಿಡ್ ಕೇರ್ ಸೆಂಟರ್‌ಗಳ ಜೊತೆಗೆ ಹೆಚ್ಚುವರಿಯಾಗಿ **03** ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರೆಯಲಾಗಿದೆ.
- ಹೋಮ್ ಐಸೊಲೇಶನ್‌ನಲ್ಲಿರುವ ವ್ಯಕ್ತಿಗಳು ಮನೆಗಳಿಂದ ಹೊರಬಂದು ಅಡ್ಡಾಡದಂತೆ ನಿಗಾವಹಿಸಲು ಹೋಬಳಿಗೆ ಒಬ್ಬರಂತೆ **16** ಮಂದಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.
- ಹೋಮ್ ಐಸೊಲೇಷನ್‌ನಲ್ಲಿರುವ ವ್ಯಕ್ತಿಗಳನ್ನು ಗುರುತಿಸುವ ಸಲುವಾಗಿ ಅವರುಗಳ ಕೈಗೆ ಸೀಲ್ ಹಾಕಲಾಗುತ್ತಿದೆ.
- ಹೊರ ರಾಜ್ಯ/ಜಿಲ್ಲೆಯಿಂದ ಬಂದ ವ್ಯಕ್ತಿಗಳು **14** ದಿನ ಕಡ್ಡಾಯವಾಗಿ ಹೋಮ್ ಕ್ವಾರಂಟೈನ್‌ನಲ್ಲಿರಲು ಆದೇಶಿಸಲಾಗಿದೆ. ಅವರಿಗೂ ಕೂಡ ಸೀಲ್ ಹಾಕಲು ಸೂಚಿಸಲಾಗಿದೆ.